ಕರ್ನಾಟಕ ಸರ್ಕಾರ
GOVERNMENT OF KARNATAKA
ಜಿಲ್ಲಾ ಪಂಚಾಯತ ಕಾರ್ಯಾಲಯ ಬೆಳಗಾವಿ-590 002
ZILLA PANCHAYAT OFFICE, BELGAUM-590 002

ದೂರವಾಣಿ 0831-2407205
Telephone -2407212

ಫ್ಯಾಕ್ಸ್/Fax 0831-2429662
e-mail ceo_zp_bgm@nic.in
eobelmms@yahoo.co.in

ಜಿಪಂ:ಅದಾ:ಬಿಲ್ಲು ವಿಳಂಬ:2013-14 ದಿನಾಂಕ: 5-2-2014

# ಜ್ಞಾಪನಾ

ವಿಷಯ:- ಮಧ್ಯಾಹ್ನ ಉಪಹಾರ ಯೋಜನೆಯಡಿಯಲ್ಲಿ ಸರ್ಕಾರೇತರ ಸಂಘಸಂಸ್ಥೆಗಳು ಮತ್ತು ಸಾಗಾಣಿಕೆ ಗುತ್ತಿಗೆದಾರರ 2013-14ನೇ ಸಾಲಿಗೆ ಸಂಬಂಧಿಸಿದ ಬಿಲ್ಲುಗಳನ್ನು ವಿಳಂಭವಾಗಿ ಸಲ್ಲಿಸುತ್ತಿರುವ ಕುರಿತು.

ಉಲ್ಲೇಖ:- 1) ಈ ಕಛೇರಿ ಪತ್ರ ದಿನಾಂಕ 1-4-2011.
2) ಈ ಕಛೇರಿ ಪತ್ರ ದಿನಾಂಕ 14-07-2012.
3) ಈ ಕಛೇರಿ ಪತ್ರ ದಿನಾಂಕ 16-09-2013.
4) ಈ ಕಛೇರಿ ಪತ್ರ ದಿನಾಂಕ 26-11-2013.
5) ದಿನಾಂಕ: 30-8-2013 & 2-9-2013ರ ಸಭೆಯ ನಡಾವಳಿ
6) ಎನ್.ಜಿ.ಓ ಒಡಂಬಡಿಕೆ ನಿಭಂದನೆಗಳು
7) ಸಾಗಾಣಿಕೆ ಗುತ್ತಿಗೆದಾರರ ಟೆಂಡರ್ ಷರತ್ತುಗಳು

**

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ 2013-14ನೇ ಸಾಲಿನಲ್ಲಿ ಗ್ರಾಮಾಂತರ ಸಾಗಾಣಿಕೆ ಗುತ್ತಿಗೆದಾರರು, ಸಗಟು ಸಾಗಾಣಿಕೆ ಗುತ್ತಿಗೆದಾರರು ಸಾಗಾಣಿಕೆ ವೆಚ್ಚದ ಬಿಲ್ಲುಗಳನ್ನು ಹಾಗೇಯೇ ಸರ್ಕಾರೇತರ ಸಂಘಸಂಸ್ಥೆಗಳ ಬಿಸಿಊಟ ಪರಿವರ್ತನಾ ವೆಚ್ಚದ ಬಿಲ್ಲು ಮತ್ತು ಕ್ಷೀರಭಾಗ್ಯ ಯೋಜನೆಯಡಿ ಹಾಲು ಪೂರೈಕೆ ವೆಚ್ಚದ ಬಿಲ್ಲುಗಳನ್ನು ಸಕಾಲದಲ್ಲಿ ಸಲ್ಲಿಸಲು ನಿಮಗೆ ಈಗಾಗಲೇ ಮೇಲೆ ತಿಳಿಸಿದ ಉಲ್ಲೇಖಿತ ಪತ್ರಗಳಲ್ಲಿ ಹಾಗೂ ಸಭೆಗಳಲ್ಲಿ ತಿಳಿಸುತ್ತಾ ಬಂದಾಗ್ಯೂ ಕೂಡಾ, ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ಆಯಾ ತಿಂಗಳು ಬಿಲ್ಲುಗಳನ್ನು ಸಲ್ಲಿಸದಿರುವುದು ಕಂಡುಬಂದಿರುತ್ತದೆ.

ದಿನಾಂಕ: 30-8-2013ರಂದು ಮಧ್ಯಾಹ್ನ ಉಪಹಾರ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರೇತರ ಸಂಘಸಂಸ್ಥೆಗಳ ಪದಾಧಿಕಾರಿಗಳ, ಸಾಗಾಣಿಕೆ ಗುತ್ತಿಗೆದಾರರು ಮತ್ತು ಅಧಿಕಾರಿಗಳ ಸಭೆಯಲ್ಲಿ ಪ್ರತಿ ತಿಂಗಳು 5ನೇ ತಾರೀಕಿನೊಳಗೆ ತಾಲೂಕ ಪಂಚಾಯತ ಕಛೇರಿಗೆ ನಿಮ್ಮಿಂದ ಆಯಾ ಹಿಂದಿನ ತಿಂಗಳ ಬಿಲ್ಲುಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕೆಂದು ತಿಳಿಸಲಾಗಿತ್ತು. ಹಾಗೇಯೇ ತಾಲೂಕ ಪಂಚಾಯತನಿಂದ ಆಯಾ ತಿಂಗಳ 10ನೇ ತಾರೀಖಿನೊಳಗೆ ಜಿಲ್ಲಾ ಪಂಚಾಯತಗೆ ಸಲ್ಲಿಸುವುದು ಹಾಗೂ ಜಿಲ್ಲಾ ಪಂಚಾಯತದಿಂದ ಪ್ರತಿ ತಂಗಳು 15ನೇ ತಾರೀಖಿನೊಳಗೆ ಬಿಲ್ಲು ಪಾವತಿಸಲಾಗುವುದಾಗಿ ತಿಳಿಸಿ ಇದಕ್ಕೆ ಎಲ್ಲರೂ ಸಮ್ಮತಿಸಿದ ನಂತರವೇ ಆದೇಶ ಹೊರಡಿಸಲಾಗಿರುತ್ತದೆ.

ಆದರೆ, ನೀವು ಸಮರ್ಪಕವಾಗಿ ಹಾಗೂ ಸಮಯಕ್ಕೆ ಸರಿಯಾಗಿ ಬಿಲ್ಲುಗಳನ್ನು ಸಲ್ಲಿಸುತ್ತಿರುವುದಿಲ್ಲ. ದಾಖಲೆಗಳನ್ನು ಪರಿಶೀಲಿಸಲಾಗಿ ಒಟ್ಟಾರೆಯಾಗಿ ತುಂಬಾ ವಿಳಂಭವಾಗಿ ಸಲ್ಲಿಸುತ್ತೀರುವುದು ಕಂಡು ಬಂದಿರುತ್ತವೆ.

ಎನ್.ಜಿ.ಓಗಳ ಒಡಂಬಡಿಕೆಗಳಲ್ಲಿ ಹಾಗೂ ಸಾಗಾಣಿಕೆದಾರರ ಟೆಂಡರ ಷರತ್ತುಗಳಲ್ಲಿ ಸ್ಪಷ್ಟವಾಗಿ ಬಿಲ್ಲು ಪಾವತಿಸುವ ಬಗ್ಗೆ ನಿಬಂಧನೆಗಳನ್ನು ಹಾಕಲಾಗಿರುತ್ತದೆ. ಹೀಗಿದ್ದಾಗ್ಯೂ ಕೂಡಾ ನಿಮ್ಮ ಈ ರೀತಿಯ ವಿಳಂಭತೆಯಿಂದ ಸರ್ಕಾರದ ಅನುದಾನ ಬಳಕೆಯಾಗುವಲ್ಲಿ ತೊಂದರೆ ಆಗುತ್ತಿದೆ ಹಾಗೂ ಅನುದಾನ ವ್ಯಪಗತವಾಗುವ (LAPSE) ಸಾದ್ಯತೆ ಇರುತ್ತದೆ. ಇದು ನಿಯಮಬಾಹಿರ ಹಾಗೂ ಆದೇಶದ ಸ್ಪಷ್ಟ ಉಲ್ಲಂಘನೆ ಆದಂತೆ ಆಗುತ್ತದೆ.

ಕಾರಣ ವಿಳಂಭಮಾಡಿ ಬಿಲ್ಲು ಸಲ್ಲಿಸುವಂತಿಲ್ಲ, ಬಿಲ್ಲು ಸಲ್ಲಿಸುವಾಗ ಸಂಪೂರ್ಣವಾಗಿ ಬಿಲ್ಲುಗಳು ಮತ್ತು ರಶೀದಿಗಳನ್ನು ಸರಿಯಾಗಿ ಪರಿಶೀಲಿಸಿ ಶಾಲಾ ಮುಖ್ಯಶಿಕ್ಷಕರಿಂದ ಹಾಗೂ ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಂದ ದೃಢೀಕೃರಣ ಪಡೆದು ಬಿಲ್ಲುಗಳನ್ನು ಸಲ್ಲಿಸುವುದು ನಿಮ್ಮ ಜವಾಬ್ದಾರಿ ಆಗಿರುತ್ತದೆ. ಬಿಲ್ಲು/ರಶೀದಿಗಳನ್ನು ನೀಟಾಗಿ/ ದಿನಾಂಕವಾರು/ ತಿಂಗಳವಾರು ಅಚ್ಚುಕಟ್ಟಾಗಿ ನಿರ್ವಹಿಸಿ ಬಿಲ್ಲುಗಳನ್ನು ಸಲ್ಲಿಸುವುದು ಕೂಡಾ ನಿಮ್ಮ ಕರ್ತವ್ಯವಾಗಿರುತ್ತದೆ.

Mid Day Meal Scheme

ಈಗಾಗಲೇ ಹಲವಾರು ಬಾರಿ ಮೇಲಿನ ಅಂಶಗಳನ್ನು ತಿಳಿಸುತ್ತಾ ಬಂದಿದ್ದರೂ ಕೂಡ ನೀರೀಕ್ಷಿತ ಸುದಾರಣೆ ಕಾಣದಿರುವುದು ತುಂಬಾ ವಿಷಾದನೀಯ.

ಮೇಲಿನ ಎಲ್ಲಾ ಅಂಶಗಳನ್ನು ತಕ್ಷಣ ಅನುಪಾಲನೆ ಮಾಡತಕ್ಕದ್ದು. ಜನವರಿ 2014ನೇ ತಿಂಗಳವರೆಗೆ ಸಂಬಂಧಿಸಿದ ನಿಮ್ಮ ಬಿಲ್ಲುಗಳನ್ನು ದಿನಾಂಕ:15-2-2014ರೊಳಗೆ ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ನಿಮ್ಮನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

(ದೀಪ ಚೋಳನ್)
ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ

ಗೆ,
-------------------

-------------------

ಪ್ರತಿಯನ್ನು ಸೂಕ್ತಕ್ರಮಕ್ಕಾಗಿ:-

1) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ -----------

2) ಸಹಾಯಕ ನಿರ್ದೇಶಕರು (ಮ.ಉ.ಯೋ) ತಾಲೂಕ ಪಂಚಾಯತ -----------